ಶ್ರೀ ಎಚ್. ವಿ. ಕೌಜಲಗಿ.—ಇದರೊಳಗೆ ಅಧಿಕಾರಿಗಳ ಲಂಚತನ ಇದೆಯೆಂದು ನನಗನ್ನಿಸುವುದಿಲ್ಲ,

ಶ್ರೀ ವಿ. ಎನ್. ಪಾಟೀಲ್.—ನೀವು ಇದನ್ನು ಡಿನ್ಯೆ ಮಾಡದೇ ಇದ್ದರೆ, ಆಗ ಆಡ್ಮಿಷನ್ ಎಂದು ನಾವು ಆ ರೀತಿ ತಿಳಿದುಕೊಳ್ಳಬೇಕಾಗುತ್ತದೆ. ಯಾವರೀತಿ ಫೇವರಿಟಿಜಂ, ಲಂಚ ಇದೆಯೆಂಬುದು 20 ಎಕರೆಗಳನ್ನು ಯಾರ್ಯಾರಿಗೆ ಕೊಟ್ಟಿದ್ದೀರೊ ಅದರಿಂದ ತಿಳಿಯುತ್ತೆ. ಅವರ ಹತ್ತಿರವಿರುವ ಭೂಮಿಯನ್ನು ಪುನಃ ತೆಗೆದುಕೊಂಡು ಈಗ ರಿ-ಡಿಸ್ಟ್ರಿಬ್ಯೂಟ್ ಮಾಡುತ್ತಾರೆಯೇ ?

Sri H. V. KOUJALGI.—If these grants are illegal, then only they will have to be withdrawn. It will have to be examined.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಜಮೀನು ಬಹಳ ಉತ್ಕೃಷ್ಟವಾದ ಜಮೀನು. ಅಲ್ಲಿ ಗೋಡಂಬಿ ಬೆಳೆಸಿಲ್ಲ. ಅದನ್ನು ಬೇರೆ ಕೆಲಸಕ್ಕೆ ಉಪಯೋಗಿಸಿದ್ದಾರೆ. ಆ ಲ್ಯಾಂಡನ್ನು ಆ ವ್ಯವಸಾಯಗಾರರಿಗೇ ಕೊಟ್ಟಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಹೇಳಿರುವುದರಿಂದ, ಇದರ ಬಗ್ಗೆ ಎನ್‌ಕ್ವೈರಿ ಮಾಡಿ. ಇದನ್ನು ಹಿಂದಿನ ರೂಲ್ಸ್‌ಗೆ ವಿರೋಧವಾಗಿ ಕೊಟ್ಟಿರುವುದರಿಂದ, ಗೋಡಂಬಿ ಅಲ್ಲಿ ಬೆಳೆಯದೇ ಇರುವುದರಿಂದ ಈ ಗ್ರಾಂಟನ್ನು ಕ್ಯಾನ್ಸಲ್ ಮಾಡಿ ಬೇರೆ ರೀತಿ ವಿತರಣೆ ಮಾಡುವುದಕ್ಕೆ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಳ್ಳುತ್ತಾರೆ ?

Sri H. V. KOUJALGI.—I will enquire into this matter. Now that it has been brought to the notice of the Government, we will take early action.

ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಈ ಪ್ರಶ್ನೆ ನಂ. 34 ಕೇಳಬೇಕೋ ಬೇಡವೋ ಎಂದು ಯೋಚಿಸುತ್ತಿದ್ದೇನೆ. ನಾನು ನನ್ನ ಪ್ರಶ್ನೆಯನ್ನು ನಾಲ್ಕು ಭಾಗಗಳಾಗಿ ಮಾಡಿದ್ದೆ. ಅದು ಜೂನಿಯರ್ ಇಂಜನಿಯರುಗಳಿಗೆ ಬಿಡ್ತಿ ಕೊಡುವ ವಿಷಯ. ಈ ಪ್ರಶ್ನೆಯನ್ನು ನಿಮ್ಮ ಕಚೇರಿಯಲ್ಲಿಯೇ ಅಮೆಂಡ್ ಮಾಡಿರುವುದು. ಅದರ ಅರ್ಥ ಹೋಗಿ ಅನರ್ಥವಾಗಿ ಪ್ರಿಂಟ್ ಆಗಿದೆ. ಆದ್ದರಿಂದ ತಾವು ಅದನ್ನು ಈಗ ತಡೆಹಿಡಿದು ಪರಿಶೀಲನೆಮಾಡಿ ನಾಳೆ ತೆಗೆದುಕೊಳ್ಳಬೇಕು.

Mr. DEPUTY SPEAKER.—I will look into it. I will hold over this question.

Percentage of Passes of P.U.C. Students of the Karnatak University

41. Sri B. B. SAYANAK (Belgaum).—

Will the Minister for Education be pleased to state :—

the percentage of the students that passed in the P.U.C. Arts and P.U.C. Science Examinations of the Karnatak University for the last three years, *i.e.*, 1967-68, 1968-69 and 1969-70 ?

Sri K. V. SHANKARA GOWDA (Minister for Education).—

P.U.C.

		Arts	*Science*
March 1968 (Annual)	...	26.98%	31.67%
October 1968 (Supplementary)	...	46.48%	46.53%
March 1969 (Annual)	...	26.00%	33.00%
October 1969 (Supplementary)	...	37.50%	52.17%
April 1970 (Annual)	...	27.5%	28.00%

Sri B. B. SAYANAK.—The results of P.U.C. Arts during March 1968, March 1969 and April 1970 are below 30 per cent. Is it the policy of the Veerendra Patil Ministry to reduce the percentage of results of P.U.C. Arts ?

Sri K. V. SHANKARA GOWDA.—It is not our policy. The percentage shows the number of students who have passed in the examination. How can the hon. Member say that it is the policy of the Government ?

Sri B. B. SAYANAK.—May I know the reasons for this low percentage of results in P.U.C. Arts ?

Sri K. V. SHANKARA GOWDA.—It is because of mass education.

Sri B. B. SAYANAK.—Is it the students or professors or examiners that are responsible for this low percentage of results ?

Sri K. V. SHANKARA GOWDA.—The examiners are not responsible. It is a reflection of the performance of the students at the examination.

ಶ್ರೀ ಎಸ್. ಬಂಗಾರಪ್ಪ.—ಈಗ ಏಪ್ರಿಲ್ 1970 ರಲ್ಲಿ ಶೇಕಡ 27.5 ಆರ್ಟ್ಸ್‌ನಲ್ಲಿ, ಸೈಯನ್ಸ್‌ನಲ್ಲಿ ಶೇಕಡಾ 28.00, 1969ರಲ್ಲಿ ಆರ್ಟ್ಸ್‌ನಲ್ಲಿ ಶೇಕಡಾ 26, ಸೈಯನ್ಸ್‌ನಲ್ಲಿ 33.00 ಹೀಗೆ ಬಂದಿದೆ. ಈ ಪ್ರಕಾರ ವಿದ್ಯಾರ್ಥಿಗಳು ಉತ್ತೀರ್ಣರಾಗಲು ತಮ್ಮ ವಿದ್ಯಾ ಇರಾಖೆಯು ಯಾವ ಮಟ್ಟದಲ್ಲಿ ಕೆಲಸ ಮಾಡುತ್ತಿದೆ ಎಂದು ಗೊತ್ತಾಗುತ್ತದೆ. ಆದ್ದರಿಂದ ನಿಮ್ಮ ಈಗಿನ ಆಡಳಿತದಲ್ಲಿ ವಿದ್ಯಾ ಮಟ್ಟವು ಕೆಳಮಟ್ಟಕ್ಕೆ ಇಳಿದಿದೆಯಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—27 ಪರ್‌ಸೆಂಟ್ ಎಂಬುದು ಏನೂ ಕಡಿಮೆಯಲ್ಲ. ನಾವು ಓದುತ್ತಾ ಇರುವಾಗ 17 ಪರ್‌ಸೆಂಟ್ ಕೂಡ ಬರುತ್ತಿತ್ತು..

Sri B. B. NAYANAK.—May I know whether the P.U.C. Arts and Science Examinations are the slaughter houses for the students ?

Sri K. V. SHANKARA GOWDA.—Certainly not, Sir.

ಶ್ರೀ ಕೆ. ಎಚ್. ಶ್ರೀನಿವಾಸ್.—ಪ್ರತಿ ವರ್ಷ ಮಾರ್ಚ್ ಪರೀಕ್ಷೆಯಲ್ಲಿ 26 ಪರ್‌ಸೆಂಟ್ ರಿಸರ್ಟ್ ಇದ್ದರೆ, ಸಪ್ಲಿಮೆಂಟರಿ ಪರೀಕ್ಷೆಯಲ್ಲಿ 46 ಪರ್‌ಸೆಂಟ್ ಮತ್ತು 37 ಪರ್‌ಸೆಂಟ್ ಎರ್ಲಾ ಬಂದಿರುತ್ತದೆ. ಇದರಿಂದ ಸಪ್ಲಿಮೆಂಟರಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಚೆನ್ನಾಗಿ ಪಾಸಾಗುತ್ತಾರೆಂದು ಅರ್ಥವಾಗುತ್ತದೆ. ಆದ್ದರಿಂದ ನಿಮ್ಮ ಈ ರೆಗ್ಯುಲರ್ ಪರೀಕ್ಷೆಗಳನ್ನು ರದ್ದು ಮಾಡಿ ಬರೀ ಸಪ್ಲಿಮೆಂಟರಿ ಪರೀಕ್ಷೆಗಳನ್ನು ಮಾತ್ರ ಮಾಡುತ್ತೀರಾ?

ಶ್ರೀ ಕೆ. ವಿ. ಶಂಕರಗೌಡ.—ಒಂದು ಸಾರಿ ಫೈಲ್ ಆದವರು ಮತ್ತೊಂದು ಸಾರಿ ಪಾಸಾಗುತ್ತಾರೆ. ಆದ್ದರಿಂದ ಸಪ್ಲಿಮೆಂಟರಿಯಲ್ಲಿ ಹೆಚ್ಚು ಪಾಸಾಗಲು ಕಾರಣ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಈಗ ಫಲಿತಾಂಶಗಳ ಶೇಕಡವಾರು ನೋಡಿದರೆ, ನಾವು ರಾಜ್ಯದಲ್ಲಿ ವಿದ್ಯೆಗೆ ಖರ್ಚುಮಾಡತಕ್ಕ ಹಣಕ್ಕೆ ಪ್ರತಿಫಲ ಸರಿಯಾಗಿ ಬರುತ್ತಾ ಇಲ್ಲ. ಆದ್ದರಿಂದ ಈ ಪರ್‌ಸೆಂಟೇಜ್ ಬಹಳ ಕಡಿಮೆ ಬರುವುದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ತಜ್ಞರ ಸಮಿತಿ ಮಾಡಿ, ಏನು ಲೋಪ ಇದೆಯೆಂಬುದನ್ನು ಕಂಡುಹಿಡಿದು ಸರಿಪಡಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಎಲ್ಲ ಹೆಚ್ಚಿಗೆ ಜನ ಫೈಲು ಆಗುತ್ತಾರೆ ಅದನ್ನೆಲ್ಲಾ ಪರೀಕ್ಷೆ ಮಾಡುವುದಕ್ಕೆ ಒಂದು ಡಿಪಾರ್ಟ್‌ಮೆಂಟಲ್ ಕಮಿಟಿ ಇದೆ. ಅವರು ಕೆಲವು ನಲಹೆಗಳನ್ನು ಮಾಡುತ್ತಾರೆ. ಅವುಗಳನ್ನು ಮುಂದೆ ಜಾರಿಗೆ ತರಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಪರೀಕ್ಷೆಯಲ್ಲಿ ಇಷ್ಟೊಂದು ಹುಡುಗರು ಫೈಲು ಆಗುವುದನ್ನು ತಪ್ಪಿಸುವುದಕ್ಕೆ ನಿಮ್ಮ ಪರೀಕ್ಷಾ ಪದ್ಧತಿಯನ್ನು ನವೀನ ಪದ್ಧತಿಯಾಗಿ ಮಾಡಿ, ವಿದ್ಯಾಮಂತ್ರಿಯವರು ಹುಡಗರಿಗೆ ಚೆಕ್ಸ್‌ಬುಕ್ಸ್ ಕೊಡಿಸಿಕೊಂಡು ಬರೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ಚೆಕ್ಸ್ ಬುಕ್ಸ್ ಕಿಡಿದುಕೊಂಡು ಬರೆಯಲು ಅವಕಾಶ ಮಾಡಿ ಕೊಡವುದಕ್ಕಾಗುವುದಿಲ್ಲ. ಪರೀಕ್ಷಾ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ತಜ್ಞರ ಅಭಿಪ್ರಾಯವಾಗಿದೆ. ಅವುಗಳನ್ನು ಯಾವ ರೀತಿ ಮಾಡಬೇಕೆಂದು ಪರೀಕ್ಷೆ ಮಾಡಲಾಗುತ್ತದೆ.

Grievances of employees of Apiculture industry in North Kanara District

45. **Sri B. P. KADAM** (Karwar).—

Will the Minister for Industries, Information and Publicity be pleased to state :—

(*a*) whether it is a fact that the staff of the Apiculture Industry are not satisfied with the Cadre and Recruitment Rules and the Service condition as they do not confer any pensionary benefit, promotional chances and extension of service to the employees ;

(*b*) whether it is a fact that vacant posts in the department are not filled up and they are kept vacant ;

(*c*) whether it has come to the notice of Government that employees of Apiculture Industry, from Noth Kanara District have represented their grievances to the Chairman of the Mysore State Khadi and Village Industries Board, Bangalore, if so, the decision taken in the matter ;

(*d*) whether theres is any difference between Coorg and other districts in the matter of administration of the Department by Government ?

Sri A. P. APPANNA (Depuly Minister for Industries).—

(*a*) Some staff of the Mysore State Khadi and Village Industries Board working in North Kanara District have made a representation to the Board for certain benefits. There are no representations from th. Centres under the control of the Department of Industries and Commerce

(*b*) There is only one post of Bee-Keeping Organiser kept vacant by the Board.

(*c*) The employees of Apiculture Industry working in North Kanara District have represented to the Chairman of the Board to consider sanction of certain benefits to them. The representation received by the Khadi and Village Industries Board is reported to be under its considearation.

(*d*) There is no difference in the administration of the Centres run by the Department of Industries and Commerce.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನಾರ್ತ್ ಕೆನರಾ ಜಿಲ್ಲೆಯಲ್ಲಿ ಈ ಉದ್ಯಮ ಅತೀ ಹೆಚ್ಚಾಗಿ ನಡೆಯುವುದರಿಂದ ಮತ್ತು ಅಲ್ಲಿ ಸೊಸೈಟಿಗಳನ್ನು ಮಾಡಿಕೊಂಡು ಕ್ರಮಬದ್ಧವಾಗಿ ಕೆಲಸ ಮಾಡುವುದರಿಂದ, ಅವರು ಸಹಾಯವನ್ನು ಕೋರಿ ಸರ್ಕಾರಕ್ಕೆ ಮತ್ತು ಖಾದಿ ಬೋರ್ಡಿ